ಶ್ರೀ ಆರ್. ಕೆಂಚಪ್ಪ.—ಮೈಸೂರು ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ನೀರು ಸರಬ ರಾಜು ಮಾಡುವುದಕ್ಕೆ 1963-64 ರಲ್ಲಿ ಒಂದು ಯೋಜನೆ ತಯಾರುಮಾಡಿ ಅದಕ್ಕೆ 24 ಕೋಟಿ ರೂಪಾಯಿ ಖರ್ಚಾಗುತ್ತದೆಂದು ಅಂದಾಜು ಮಾಡಲಾಗಿದೆ ಎಂದು ಹೇಳಿದ್ದೀರಿ. ತುಮಕೂರು ಜಿಲ್ಲೆಯಲ್ಲಿ 675 ಗ್ರಾಮಗಳಿಗೆ ನೀರು ಒದಗಿಸುವ ಯೋಜನೆ ಮಾಡಿದೆ ಎಂದು ಸಹ ಉತ್ತರ ಹೇಳಿದ್ದೀರಿ. ಹಾಗಾದರೆ ಇದುವರೆಗೆ ಯಾವ ಯಾವ ಗ್ರಾಮಗಳಲ್ಲಿ ಕಾಮಗಾರಿ ಕೈಕೊಂಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಯಾವ ಯಾವ ಗ್ರಾಮಗಳಲ್ಲಿ ಯೋಜನೆ ಕೈಕೊಂಡಿದ್ದೇವೆ ಎಂಬುದಕ್ಕೆ ಒಂದು ಉದ್ದವಾದ ಲಸ್ಟ್ ಇದೆ. ಈ ಲಸ್ಟ್ ಆ ಮೇಲೆ ಕೊಡುತ್ತೇನೆ. ಕಳೆದ ವರ್ಷ ತುಮಕೂರು ಜಿಲ್ಲೆಯಲ್ಲಿ 1963-64ರಲ್ಲಿ ಒಂದು ಲಕ್ಷ ಮೂವತ್ತಾರು ಸಾವಿರ ರೂಪಾಯಿ ಲೋಕರ್ ಡೆವಲಪ್‌ಮೆಂಟ್ ವರ್ಕ್ಸ್ ಸ್ಕೀಂನಲ್ಲಿ ಬಾವಿ ತೆಗೆಯುವುದಕ್ಕೋಸ್ಕರ ಕೊಟ್ಟಿದೆ. ಈ ವರ್ಷ ತುಮಕೂರು ಜಿಲ್ಲೆಯಲ್ಲಿ ಎರಡು ಸ್ಕೀಂ—ಒಂದು ಬಾಣನಂದ್ರದಲ್ಲಿ ಇನ್ನೊಂದು ಬುಕ್ಕಾಪಟ್ಟಣದಲ್ಲಿ ಕೇಂದ್ರ ಸರಕಾರಕ್ಕೆ ತಿಳಿಸಿ ಮಂಜೂರಾದ ಮೇಲೆ ಮಾಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—1963-64ರಲ್ಲಿ ಅಂದಾಜು ಮಾಡಿ ತಯಾರಿಸಿದ ರೂರಲ್ ವಾಟರ್ ಸಪ್ಲೈ ಸ್ಕೀಂನಲ್ಲಿ ಯಾವ ಯಾವ ಗ್ರಾಮಗಳು ಇವೆ ?

Sri RAMAKRISHNA HEGDE.—It is an exhaustive list.

ಶ್ರೀ ಆರ್. ಕೆಂಚಪ್ಪ.—ಎಷ್ಟು ವರ್ಷಗಳಲ್ಲಿ ಈ ಯೋಜನೆ ಪೂರ್ತಿ ಮಾಡುತ್ತೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಬೇರೆ ಪ್ರಶ್ನೆ ಬಂದ ಕಾಲದಲ್ಲಿ ಅದಕ್ಕೆ ಉತ್ತರ ಹೇಳಿದ್ದೇನೆ. ಇದೊಂದು ದೊಡ್ಡ ಬೃಹತ್ ಯೋಜನೆ. 24 ಕೋಟಿ ಅಂದಾಜು ಮಾಡಿದೆ. ಈ ಯೋಜನೆ ಪೂರ್ತಿ ಮಾಡಲು ನಾಲ್ಕೈದು ವರ್ಷವಾದರೂ ಬೇಕಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಿಂದಿನ ಮಂತ್ರಿಮಂಡಳದಲ್ಲಿ ಈ ಖಾತೆ ವಹಿಸಿಕೊಂಡು ಸಚಿವರಾಗಿದ್ದಂಥ ಶ್ರೀ ಟಿ. ಸುಬ್ರಹ್ಮಣ್ಯರವರು, ಐದು ವರ್ಷಗಳಲ್ಲಿ ಪ್ರತಿಯೊಂದು ಗ್ರಾಮಕ್ಕೆ ಕುಡಿಯುವ ನೀರಿನ ಬಾವಿ ಕೊಡುತ್ತೇವೆಂದು ಅಶ್ವಾಸನೆ ಕೊಡಿಸಿದ್ದರು. ಆ ಮಾತನ್ನು ನೀವು ಯಾವಾಗ ಪೂರೈಸಿ ಕೊಡುತ್ತೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅವರು ಏನು ಹೇಳಿದ್ದರು ನನಗೆ ಗೊತ್ತಿಲ್ಲ. ಅವರು ಹೇಳಿರಲಿ ಅಥವಾ ಬಿಡಲಿ ಸರಕಾರ ಆದಷ್ಟು ಜಾಗ್ರತೆ ಕುಡಿಯುವ ನೀರಿನ ಬಾವಿಗಳನ್ನು ಮೂರನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಪ್ರತಿಯೊಂದು ಗ್ರಾಮಕ್ಕೆ ಒದಗಿಸುವ ಉದ್ದೇಶ ಪಟ್ಟಿದೆ. ಅದನ್ನು ಕಾರ್ಯಗತ ಮಾಡಲು ಸರ್ವ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ರೂರಲ್ ವಾಟರ್ ಸಪ್ಲೈ ಸ್ಕೀಂನಲ್ಲಿ ನೀರನ್ನು ಗ್ರಾಮಾಂತರ ಪ್ರದೇಶಕ್ಕೆ ಒದಗಿಸುವುದಕ್ಕೆ ನೇರವಾಗಿ ರಾಜ್ಯ ಸರಕಾರ ಪಿ. ಡಬ್ಲ್ಯೂ. ಡಿ. ಇಂತಾಹ ಮುಖಾಂತರ ಕೆಲಸ ಮಾಡಿಸಿ ಕೊಡುತ್ತೀರಾ ಅಥವಾ ಗ್ರಾಮ ಪಂಚಾಯಿತಿಗಳ ಮೂಲಕ ಮಾಡಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದರಲ್ಲಿ ಎರಡು ತರಹದ ಸ್ಕೀಂ ಇವೆ. ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂ ಎಂಬುದು ಒಂದು. ಇದು ಒಂದು ದೊಡ್ಡ ಸ್ಕೀಂ. ಪೈಪ್ ವಾಟರ್ ಸ್ಕೀಮಿಗೆ ಎರಡರಿಂದ ಐದು ಲಕ್ಷ ರೂಪಾಯಿವರೆಗೆ ಖರ್ಚು ಬರುತ್ತದೆ. ಪಿ. ಡಬ್ಲ್ಯೂ. ಡಿ. ಇನ್‌ವೆಸ್ಟಿಗೇಷನ್ ಮಾಡಿ ಪ್ಲಾನ್ ತಯಾರ್ಮಾಡುತ್ತಾರೆ. ಕೆಲಸ ಎಗ್ಜಿಕ್ಯೂಟ್ ಆಗುವುದನ್ನು ಸೂಪರ್‌ವೈಜು ಮಾಡುತ್ತಾರೆ. ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್‌ನಲ್ಲಿ ಈ ಕೆಲಸ ತೆಗೆದುಕೊಳ್ಳಬೇಕೆಂಬ ಇನ್ನೊಂದು ಸ್ಕೀಂ ಇದೆ. ಇದರಲ್ಲಿ ಬಾವಿಗೆ ಇಷ್ಟು ರೂಪಾಯಿ ಎಂದು ಹಣ ಕೊಡುತ್ತೇವೆ. ಕುಡಿಯುವ ನೀರಿನ ಬಾವಿ ಸಲುವಾಗಿ ಎಲ್ಲ ಸಹಾಯ ಕೊಡಲಾಗುತ್ತಿದೆ.

———

1-00 P. M.

Cultivation of the Land belonging to Chatra Inam in Gulur Hobli, Tumkur Taluk.

* Q.—252. Sri K. LAKKAPPA (Hebbur).—

Will the Government be pleased to state :—

(a) the number of persons cultivating the land belonging to Chatra Inam in Survey No. 3 at Kondapura and in Survey Nos. 20,13,17 at Kallumata in Gulur Hobli, Tumkur Taluk ;

(SRI K. LAKKAPPA)

(*b*) the extent of land belonging to the Chatra that has been leased for cultivation ;

(*c*) what are the conditions of the lease and the lease amount fixed by auction by the Tahsildar, Tumkur ;

(*d*) the income derived from those lands annually and whether the amounts have been deposited to the Treasury regularly ;

(*e*) whether it has come to their notice that the persons who have taken on Panchasalu-gutta have not been cultivating personally and therefore fertility of the lands deteriorated ;

(*f*) whether any representation have been made by the Group Village Panchayat, Chickkasarangi to release the above lands and for cashew cultivation on co-operative basis ?

A.—**Sri B. D. JATTI** (Minister for Finance). [On behalf of SRI M. V. KRISHNAPPA (Minister for Revenue)].—

(*a*) Two persons.

(*b*) 178-21 guntas.

(*c*) The conditions of lease are as specified in Muzrai Manual. The lease amount fixed is Rs. 1,419.

(*d*) A sum of Rs. 1,419 is realised annually till 1962-63 and Demand for Rs. 1,419 for the year 1963-64 is booked for recovery. The realised amounts are deposited regularly.

(*e*) No.

(*f*) Yes.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ಇವರಿಂದ ಪ್ರತಿವರ್ಷವೂ ಗುತ್ತಿಗೆ ಕರಾರು ಪ್ರಕಾರ ಬರುವ ಹಣವೆಷ್ಟು ? ಗುತ್ತಿಗೆ ಕರಾರು ಏನು ?

ಶ್ರೀ ಬಿ. ಡಿ. ಜತ್ತಿ.—ಎರಡೂ ಕೊಟ್ಟಿದೆ. ಈಗ ಬರತಕ್ಕಂಥ ಹಣ ರೂ. 1,419. ಇದು ಮೊದಲು ಇದ್ದದ್ದು.

ಶ್ರೀ ಕೆ. ಲಕ್ಕಪ್ಪ.—ಫೇರ್ ಪ್ರೈಸ್ ಏನಾದರೂ ಫಿಕ್ಸ್ ಮಾಡುತ್ತೀರಾ, ಜಮೀನುಗಳಲ್ಲಿ ಎಷ್ಟು ಆದಾಯ ಬರಬಹುದು, ಎಷ್ಟು ಫಸಲು ಬರಬಹುದು, ಅದರ ಮೇಲೆ ಎಷ್ಟು ಗುತ್ತಿಗೆ ಕೊಡಬೇಕು ಅಂತ ಮಾಡಿದೆ ?

ಶ್ರೀ ಬಿ. ಡಿ. ಜತ್ತಿ.—ಜೆನೆನ್ಸಿ ಆಕ್ಟ್ ಪ್ರಕಾರ ತಹಸೀಲ್‌ದಾರರಿಗೆ fair rent ನಿಗದಿ ಮಾಡಲು ಅಧಿಕಾರ ಇದೆ.

ಶ್ರೀ ಕೆ. ಲಕ್ಕಪ್ಪ.— ತಹಸೀಲ್‌ದಾರರು ಫೇರ್ ಪ್ರೈಸ್ ಫಿಕ್ಸ್ ಮಾಡಿದ್ದಾರೆಯೆ ?

Sri B. D. JATTI.—Sir, the Tahsildar has powers under the Tenancy Act to fix the fair rent...

Mr. SPEAKER.—He asked about fair price.

Sri B. D. JATTI.—It is fair rent, Sir. It cannot be fair price. The lands are not sold.

ಶ್ರೀ ಕೆ. ಲಕ್ಕಪ್ಪ.—ಇವರು ಅಬ್ಸೆಂಟಿ ಲ್ಯಾಂಡ್‌ಲಾರ್ಡ್‌ಗಳೆ ?

Sri B. D. JATTI.—That has not been brought to notice according to the official papers with me. There are two persons who have taken lease for a period of five years and they are regularly paying the rent and they are not defaulters.

ಶ್ರೀ ಕೆ. ಲಕ್ಕಪ್ಪ.—ಜಮೀನುಗಳು ಬಹಳ ಬೆಲೆ ಬಾಳುವುವು. ಇದಕ್ಕಿಂತಲೂ ಹಾಸ್ಟಿ ಕೊಡಬೇಕಾದರೆ ಸಂಬಂಧಪಟ್ಟವರು ತಿರಸ್ಕಾರ ಮಾಡಿದ್ದಾರೆ. ಇದನ್ನು ಹರಾಜಿನಲ್ಲಿ ಏಕೆ ಪಡೆಯಬಾರದು ?

Sri B. D. JATTI.—Because the tenants are to be protected according to the Tenancy Act and simply because somebody is interested in geting more money, we cannot disturb the tenant.

Mr. SPEAKER.—Question Hour is over.

QUESTIONS FOR ANSWERS ON THE DAY

(but not taken up).

Construction of a Dam to Jinagihalla near Habbenahalli, Naikanahatti in Challakere Taluk.

*Q.—588. S. H. BASANNA (Molakalmuru).—

Will the Government be pleased to state :—

(*a*) whether there is a proposal to construct a dam to Jinagihalla near Habbenahalli, Naikanahatti in Challakere Taluk ;

(*b*) if so, the action taken by them in this behalf till now ;

(*c*) the extent of land that could be irrigated thereunder ?

*A.—Sri S. NIJALINGAPPA (Chief Minister).—

(*a*) The matter is under investigation.

(*b*) Does not arise in view of (*a*) above.

(*c*) Does not arise in view of (*a*) and (*b*) above.

Encroachment of Government Lands in Hosadurga Taluk.

*Q.—616. Sri G. T. RANGAPPA (Hosadurga).—

Will the Government be pleased to state :—

(*a*) whether it has come to their notice that Government lands have been encroached upon and are being cultivated in Hosadurga Taluk and if so, the extent thereof ;

(*b*) the action they have taken in this regard ?

*A.—Sri M. V. KRISHNAPPA (Minister for Revenue).—

(*a*) Yes. 2,380 acres.

(*b*) Action is being taken to evict unauthorised cultivators as per rules.